ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೦ Volume - 160	ಬೆಂಗಳೂರು, ಸೋಮವಾರ, ೧೮ ಆಗಸ್ಟ್, ೨೦೨೫ (ಶ್ರಾವಣ ೨೭, ಶಕವರ್ಷ ೧೯೪೭) BENGALURU, MONDAY, 18 AUGUST, 2025 (SHRAVANA 27, SHAKAVARSHA 1947)	ಸಂಚಿಕೆ ೧೬೦ Issue 160

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

PROCEEDINGS OF THE GOVERNMENT OF KARNATAKA

Sub : Fixation of term of office and other conditions of service of Hon'ble Justice Mr. Ashok.B.Hinchigeri, Chairman, Law Commission of Karnataka, Bengaluru-Orders-reg.

Red : 1. G.O. No. Law 42 HRC 2008, dated: 12.01.2009.
2. Gove. Notification No. Law 95 KLM 2024, dated: 21.10.2024

****

Preamble:

The Law Commission of Karnataka with Headquarters at Bengaluru was constituted under G.O. dated: 12.01.2009, read (1) above. After the completion of the term of office justice S.R Bannurmath, Justice Mr. Ashok.B.Hinchigeri is appointed as the Chairman, Law Commission of Karnataka under Government Notification dated 21.10.2024 read at (2) above. In pursuance of the orders, Hon'ble Justice Mr. Ashok.B.Hinchigeri has assumed office of the Chairman, Law Commission of Karnataka on 30.10.2024 (B/N).

In accordance with the G.O. dated: 12.01.2009 and Notification dated: 21.10.2024 the term of office and other condition of service of Justice Mr. Ashok.B.Hinchigeri, Chairman, Law Commission of Karnataka are required to be issued separately with consultation with the Finance Department.

Hence the orders.

Government Order No. LAW 95 KLM 2024,
Benagaluru, Dated: 13.12.2024

The term of office of Hon'ble Justice Mr. Ashok.B.Hinchigeri, Chairman, Law Commission of Karnataka, Bengaluru shall be five years. His pay, allowances and all other conditions of service shall be the same as that of a chief Justice of High Court.

Provided that if he is at the time of his appointment in receipt in of or eligible to receive any pension and has elected to draw or receive the pension (other than disability or wound pension) in respect of any previous service under the Government of the Union or of the State, his salary in respect of service as the Chairman shall be proportionately reduced:-

(i) By the amount of pension;

(ii) If he was before assuming office, receiving in the lieu of portion of pension due to him in respect of such previous service, the commuted value thereof, by the amount of that portion of the pension; and

(iii) By any other form of retirement benefits, being drawn or availed or to be drawn or availed by him;

This order is issued with the concurrence of the Finance Department vide its Endorsement No: FD 549 Exp-10/2024 (e) dated: 07.12.2024

By Order and in the name of the
Government of Karnataka

(K.L. ASHOK)
Principal Secretary to Government
Law, Justice and Human Rights Department

PR-165

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕೋನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ನಿಯಮಬಾಹಿರವಾಗಿ ಕಚ್ಚಾ ಸಕ್ಕರೆಯನ್ನು ಮತ್ತು ಕಬ್ಬಿನ ರಸವನ್ನು ಮಾರ್ಗಾಂತರ ಮಾಡಿ ಇನ್ನಾವುದೇ ಉತ್ಪನ್ನಗಳನ್ನು ಉತ್ಪಾದಿಸುವುದನ್ನು ನಿಷೇಧಿಸುವ ಕುರಿತು.

ಓದಲಾಗಿದೆ:

1. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ: DSK/DEV/30/2021-22/158, Dated:30.05.2023
2. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ: DSK/DEV/30/2021-22/158, Dated:21.10.2023
3. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 106747/2023 C/W ರಿಟ್ ಅರ್ಜಿ ಸಂಖ್ಯೆ:104198/2023 ರಲ್ಲಿ ದಿನಾಂಕ: 03.12.2024ರಂದು ನೀಡಿದ ಆದೇಶ
4. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:DSK/LGL/50/2024-25/1327, Dated:29.11.2024
5. ಸರ್ಕಾರದ ಪತ್ರ ಸಂಖ್ಯೆ: ಸಿಐ 311 ಸಿಓಎಫ್ 2024, ದಿನಾಂಕ:03.12.2024

6. ಸರ್ಕಾರದ ಪತ್ರ ಸಂಖ್ಯೆ: ಸಿಐ 311 ಸಿಓಎಫ್ 2024, ದಿನಾಂಕ:04.12.2024
7. ಸರ್ಕಾರದ ಪತ್ರ ಸಂಖ್ಯೆ: ಸಿಐ 311 ಸಿಓಎಫ್ 2024, ದಿನಾಂಕ:05.12.2024
8. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ: ಡಿಎಸ್‌ಕೆ/ಎಲ್‌ಜಿಎಲ್ /53/2024-25, ದಿನಾಂಕ:12.12.2024
9. ಅಳಗವಾಡಿ ಬೀರೇಶ್ವರ ಶುಗರ್ಸ್ ಪ್ರೈ ಲಿ., ಅಳಗವಾಡಿ ರಾಯಭಾಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ದಿನಾಂಕ:12.12.2024ರ ಮನವಿ

*****

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ಆದೇಶದಲ್ಲಿ, ಶುಗರ್‌ಕೇನ್(ಕಂಟ್ರೋಲ್) ಆರ್ಡರ್ 1966ರ ಖಂಡ 6, 7 ಮತ್ತು 8 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಗೋಕಾಕ್ ರೋಡ್, ಅಳಗವಾಡಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ – ಈ ಪವರ್ ಕ್ರಷರ್ ಘಟಕದ ಕಾರ್ಯಾಚರಣೆಯನ್ನು ಮತ್ತು ಕಬ್ಬು ನುರಿಸುವುದನ್ನು ನಿಲ್ಲಿಸುವಂತೆ ಹಾಗೂ ಕಬ್ಬು ಮೀಸಲು ಕ್ಷೇತ್ರದಲ್ಲಿನ ಕಬ್ಬಿನ ಖರೀದಿಯನ್ನು ಮತ್ತು ಸಂಗ್ರಹಣೆಯನ್ನು ಕೂಡಲೇ ನಿಲ್ಲಿಸುವಂತೆ ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಇವರಿಗೆ ನಿರ್ದೇಶನವನ್ನು ನೀಡಲಾಗಿತ್ತು ಹಾಗೂ ಈ ಆದೇಶದ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳುವಂತೆ ಮತ್ತು ಕಬ್ಬಿನ ಖರೀದಿ ಹಾಗೂ ಸಂಗ್ರಹಣೆಯನ್ನು ಕೂಡಲೇ ನಿಲ್ಲಿಸುವುದರ ಮೂಲಕ ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಇವರು ಪವರ್ ಕ್ರಷರ್ ಘಟಕವನ್ನು ಪ್ರಾರಂಭಿಸದಂತೆ ತಡೆಹಿಡಿಯಲು ಮತ್ತು ಶ್ರೀ ಬ್ರಹ್ಮಾನಂದ ಸಾಗರ್‌ಜಾಗರಿ ಇಂಡಸ್ಟ್ರೀಸ್‌ನ ಆವರಣದಲ್ಲಿ ಹುಡುಕಲು, ಪವರ್ ಕ್ರಷರ್ ಘಟಕವನ್ನು ಸ್ವಾಧೀನಪಡಿಸಿಕೊಂಡು ಮುದ್ರೆ ಹಾಕಲು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ನಿರ್ದೇಶನವನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದಲ್ಲಿ, ಶುಗರ್‌ಕೇನ್ (ಕಂಟ್ರೋಲ್) ಆರ್ಡರ್ 1966ರ ಖಂಡ 6, 7, 8 ಮತ್ತು 11 ರಲ್ಲಿ ಮತ್ತು ಶುಗರ್ ಕೇನ್ (ಕಂಟ್ರೋಲ್) (ಅಮೆಂಡ್‌ಮೆಂಟ್) ಆರ್ಡರ್ 2006ರ ಖಂಡ 6 ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಆಸ್ಕಿನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಗಳು ಆರ್.ಎಸ್.ಸಂಖ್ಯೆ:106/2, ಮತ್ತು ಆರ್.ಎಸ್.ಸಂಖ್ಯೆ:106/3, ಅಳಗವಾಡಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇಲ್ಲಿ ಕಬ್ಬು ನುರಿಸುವುದನ್ನು ಮತ್ತು ಸಕ್ಕರೆ ಕಾರ್ಖಾನೆಯ ಕಾರ್ಯಾಚರಣೆಯನ್ನು ನಿಲ್ಲಿಸಲು ಮತ್ತು ಅದೇ ರೀತಿ ಎಥನಾಲ್ ಅನ್ನು ಉತ್ಪಾದಿಸುವುದಕ್ಕಾಗಿ ಕಬ್ಬು ನುರಿಸಲು ಕಬ್ಬಿನ ಖರೀದಿ ಹಾಗೂ ಸಂಗ್ರಹಣೆಯನ್ನು ಮಾಡುತ್ತಿರುವುದನ್ನು ಕೂಡಲೇ ನಿಲ್ಲಿಸುವಂತೆ ಆದೇಶಿಸಲಾಗಿತ್ತು. ಮುಂದುವರಿದು, ಶುಗರ್‌ಕೇನ್(ಕಂಟ್ರೋಲ್) (ಅಮೆಂಡ್‌ಮೆಂಟ್) ಆರ್ಡರ್ 2006ರ ಖಂಡ 6 ಎ ರ ಉಲ್ಲಂಘನೆಯ ಹಿನ್ನೆಲೆಯಲ್ಲಿ ಸದರಿ ಏಕೀಕೃತ ಘಟಕಗಳನ್ನು ತೆಗೆದು ಹಾಕುವಂತೆ ಆಸ್ಕಿನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಇವರಿಗೆ ನಿರ್ದೇಶನವನ್ನು ನೀಡಲಾಗಿತ್ತು ಹಾಗೂ ಈ ಆದೇಶದ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳುವಂತೆ ಮತ್ತು ಕಬ್ಬಿನ ಖರೀದಿ ಹಾಗೂ ಸಂಗ್ರಹಣೆಯನ್ನು ಕೂಡಲೇ ನಿಲ್ಲಿಸುವುದರ ಮೂಲಕ ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕಿನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ – ಈ ಸಕ್ಕರೆ ಕಾರ್ಖಾನೆಯ ಕಾರ್ಯಾಚರಣೆಯನ್ನು ತಡೆಹಿಡಿಯಲು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ನಿರ್ದೇಶನವನ್ನು ನೀಡಲಾಗಿತ್ತು.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಹೊರಡಿಸಿದ ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶವನ್ನು ಪ್ರಶ್ನಿಸಿ ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್, 150/6, ಗೋಕಾಕ್ ರೋಡ್, ಅಳಗವಾಡಿ, ಹಾರೂಗೇರಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:104198/2023 ಅನ್ನು ದಾಖಲಿಸಿದ್ದರು ಹಾಗೂ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಹೊರಡಿಸಿದ ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶವನ್ನು ಪ್ರಶ್ನಿಸಿ ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., 150/6, ಗೋಕಾಕ್ ರೋಡ್, ಅಳಗವಾಡಿ, ಹಾರೂಗೇರಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಮತ್ತು ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್, 150/6, ಗೋಕಾಕ್ ರೋಡ್, ಅಳಗವಾಡಿ, ಹಾರೂಗೇರಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:106747/2023 ಅನ್ನು ದಾಖಲಿಸಿದ್ದರು. ಅರ್ಜಿದಾರರಾದ ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಮತ್ತು ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಇವರು ದಿನಾಂಕ:02.12.2024ರಂದು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೆಮೋ ಸಲ್ಲಿಸಿ ರಿಟ್ ಅರ್ಜಿ ಸಂಖ್ಯೆ:104198/2023 ಮತ್ತು ರಿಟ್ ಅರ್ಜಿ ಸಂಖ್ಯೆ: 106747/2023 ಅನ್ನು ಹಿಂಪಡೆಯಲು ಕೋರಿದ್ದ ಹಿನ್ನೆಲೆಯಲ್ಲಿ, ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ರಿಟ್ ಅರ್ಜಿ ಸಂಖ್ಯೆ:104198/2023 ಮತ್ತು ರಿಟ್ ಅರ್ಜಿ ಸಂಖ್ಯೆ: 106747/2023ಗಳನ್ನು ವಜಾಗೊಳಿಸಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಪತ್ರದಲ್ಲಿ, ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಇವರು ಐ.ಇ.ಎಂ.ನಲ್ಲಿ ಮತ್ತು ತಿದ್ದುಪಡಿಗಳಲ್ಲಿ ನಮೂದಿಸಲಾದ ಷರತ್ತು ಮತ್ತು ನಿಬಂಧನೆಗಳನ್ವಯ ಯಾವುದೇ ಸಕ್ಕರೆ ಕಾರ್ಖಾನೆಗಳ 15.00 ಕಿ.ಮೀ ವ್ಯಾಪ್ತಿಯ ಒಳಗೆ ಒಂದು ವರ್ಷದಲ್ಲಿ ಬೆಳೆಯಲಾದ ಕಬ್ಬಿನಲ್ಲಿ ಶೇ 5.00 ರಷ್ಟು ಕಬ್ಬನ್ನು ಮೀರದಂತೆ ಶ್ರೀ ಬ್ರಹ್ಮಾನಂದ ಸಾಗರ್‌ಜಾಗರಿ ಇಂಡಸ್ಟ್ರೀಸ್ ಆವರಣದಲ್ಲಿ ಕಬ್ಬನ್ನು ನುರಿಸಲು ಮತ್ತು ಕಬ್ಬಿನ ರಸವನ್ನು ಹಾಗೂ ಸಿರಪ್ ಅನ್ನು ಉತ್ಪಾದಿಸಲು ಶುಗರ್‌ಕೇನ್(ಕಂಟ್ರೋಲ್) ಆರ್ಡರ್ 1966 ರಲ್ಲಿ ನಿಷೇಧವಿರುವುದಿಲ್ಲವೆಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಅಭಿಪ್ರಾಯಿಸುತ್ತಾ, ಅಳಗವಾಡಿ ಬೀರೇಶ್ವರ ಶುಗರ್ಸ್ ಪ್ರೈ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಂದ ದಿನಾಂಕ:25.11.2024ರಂದು ಸ್ವೀಕೃತವಾದ ಮನವಿಯಲ್ಲಿ, ಸ್ಥಳ ಪರಿವೀಕ್ಷಣೆ ನಡೆಸಲು ಮತ್ತು ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಇವರು ಕಬ್ಬಿನ ರಸ ಮತ್ತು ಕಚ್ಚಾ ಸಕ್ಕರೆಯನ್ನು ಉತ್ಪಾದಿಸುತ್ತಿರುವುದನ್ನು ತಡೆಹಿಡಿಯಲು ಹಾಗೂ ಶುಗರ್‌ಕೇನ್(ಕಂಟ್ರೋಲ್) ಆರ್ಡರ್ 1966ರ ಮತ್ತು ತಿದ್ದುಪಡಿ ಆದೇಶಗಳ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳುವಂತೆ ಕೋರಿರುವ ಮನವಿಯ ಕುರಿತು ಮುಂದಿನ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿ ಅಳಗವಾಡಿ ಬೀರೇಶ್ವರ ಶುಗರ್ಸ್ ಪ್ರೈ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ದಿನಾಂಕ:25.11.2024ರ ಮನವಿಯನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಕಳುಹಿಸಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ(5)ರ ಪತ್ರದಲ್ಲಿ, ಅಳಗವಾಡಿ ಬೀರೇಶ್ವರ ಶುಗರ್ಸ್ ಪ್ರೈ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಮನವಿಯ ಕುರಿತು ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ಸಕ್ಕರೆ ತಂತ್ರಜ್ಞರನ್ನು ಒಳಗೊಂಡ ತನಿಖಾ ತಂಡದಿಂದ ಪರಿಶೀಲನೆಯನ್ನು ನಡೆಸಿ ವಾಸ್ತವಾಂಶವುಳ್ಳ ವರದಿಯೊಂದಿಗೆ ಪ್ರಸ್ತುತ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕಳುಹಿಸಿ ಕೊಡುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಕೋರಲಾಗಿತ್ತು.

ಪ್ರಕರಣಗಳು ಮಾನ್ಯ ನ್ಯಾಯಾಲಯದ ಪರಿಶೀಲನೆಯಲ್ಲಿ ಇರುವ ಸಂದರ್ಭದಲ್ಲಿ ಓದಲಾದ ಕ್ರಮ ಸಂಖ್ಯೆ(4) ರ ಪತ್ರದಲ್ಲಿ ವ್ಯಕ್ತಪಡಿಸಲಾದ ಅಭಿಪ್ರಾಯದಲ್ಲಿನ ಅಂಶಗಳ ಕುರಿತು

ಸ್ಪಷ್ಟನೆಯನ್ನು ಒದಗಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (6) & (7) ರ ಪತ್ರಗಳಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರನ್ನು ಕೋರಲಾಗಿತ್ತು.

ಮುಂದುವರಿದು, ಮೇಲೆ ಓದಲಾದ ಕ್ರಮ ಸಂಖ್ಯೆ(8)ರ ಪತ್ರದೊಂದಿಗೆ ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಮತ್ತು ತಾಂತ್ರಿಕ ಸಲಹೆಗಾರರು ಸಕ್ಕರೆ ತಂತ್ರಜ್ಞಾನ, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ ಇವರು ದಿನಾಂಕ:06.12.2024 ರಂದು ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್, ಹಾರೂಗೇರಿ ರಸ್ತೆ, ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಮತ್ತು ಆಸ್ಕಿನ್ಸ್ ಬಯೋಫ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಗೆ ಭೇಟಿ ನೀಡಿ ಸಲ್ಲಿಸಿರುವ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದರು. ಸದರಿ ವರದಿಯ ಉದ್ಧೃತ ಭಾಗವು ಈ ಕೆಳಕಂಡಂತಿದೆ;

A. The inspection was conducted on 06th December 2024 at 11.00 am. The scope of report is confined to the aspects of the manufacturing activities undertaken by Shri Brahmanand Sagar Jaggery Industries and M/s Askins Biofules Pvt. Ltd, Alagawadi, Taluk Raibag, District Belagavi,
B. S.Nijalingappa sugar institute Belagavi, Director and Technical Advisor Sugar Technology have inspected the Brahmanand Sagar Jaggery unit on 06-12-2024 and have gone through all the areas comprising with weigh bridge, unloaders cane carrier, milling, Boiler, clarification and evaporation station and connected lines towards boiling house, syrup extraction station with syrup diversion lines towards boiling house and ethanol plant where as the pipe lines towards ethanol plant is removed, further at crystallization we have observed that, the defecated syrup is been used for pan boiling for crystallization followed by graining, of massecuite by adding seed slurry, the exhaustibility of massecuite is boiled under the vacuum pan, and discharged in air cooled crystallizer for cooling, then massecuite is pumped to pagmill for centrifuge in continue machines.
C. The sugar and molasses discharged from the continues machines analysis report of material as below:

Sl.No.	Particulars	Analysis
1	Defecated Syrup	Brix,=61.40, Pol%=49.50, Pty=80.62
2	Massecute	Brix,=91.4, Pol%=55.50, Pty=60.72
3	Brown Sugar	Brix,=96.30, Pol%=83.40, Pty=86.60
		RS,=9.90%
		Moist,=4.68%

D. The daily crushing capacity is 750 TCD to 800 TCD and processing in vacuum pan boiling, and massecute is cured in continues centrifugal machines, the seed sugar discharged from the machine is observed like brown colour sugar with fine crystals, since the seed sugar is

conveyed throw screw conveyer and bagged in pp bags and weighed, stitched and stored in ware house.

E. The brown sugar produced in the Brahamanand Sagar Jaggery Industries Limited is adopted with sugar process equipments except sulphur burner, batch types centrifugals and sugar hopper, dryer, grader etc and also it is also observed that the final molasses is been stored in molasses steel tank, the seed sugar produced from the vacuum pan is like low grade raw sugar.

ಮೇಲೆ ಓದಲಾದ ಕ್ರಮ ಸಂಖ್ಯೆ(9)ರ ಪತ್ರದಲ್ಲಿ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:30.05.2023 ಮತ್ತು 21.10.2023ರ ಆದೇಶಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಮತ್ತು ಅಬಕಾರಿ ಇಲಾಖೆಗೆ ಸೂಚಿಸುವಂತೆ ಮತ್ತು ದಿನಾಂಕ:30.05.2023 ಮತ್ತು 21.10.2023 ಆದೇಶಗಳಿಗೆ ವ್ಯತಿರಿಕ್ತವಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ವ್ಯವಹರಿಸಿರುವುದನ್ನು ರದ್ದುಪಡಿಸಲು/ಹಿಂಪಡೆಯಲು ಹಾಗೂ ದಿನಾಂಕ:30.05.2023 ಮತ್ತು ದಿನಾಂಕ:21.10.2023 ರ ಆದೇಶಗಳಿಗೆ ವ್ಯತಿರಿಕ್ತವಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಒಳಗೊಂಡಂತೆ ರಾಜ್ಯ ಸರ್ಕಾರದ ವಿವಿಧ ಪ್ರಾಧಿಕಾರಗಳೊಂದಿಗೆ ವ್ಯವಹರಿಸಿರುವುದನ್ನು ತಡೆಹಿಡಿಯುವಂತೆ ಅಳಗವಾಡಿ ಬೀರೇಶ್ವರ ಶುಗರ್ಸ್ ಪ್ರೈ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ – ಈ ಕಾರ್ಖಾನೆಯವರು ಕೋರಿರುತ್ತಾರೆ.

Sugarcane(Control) Order 1966ರ ಖಂಡ 2(ಸಿ)ರಲ್ಲಿ ಸಕ್ಕರೆ ಕಾರ್ಖಾನೆಯ ಕುರಿತು ಈ ಕೆಳಕಂಡಂತೆ ಪರಿಭಾಷಿಸಲಾಗಿದೆ.

> `factory' means and premises including the precincts thereof in any part of which sugar is manufactured by vacuum pan process and at its own option, ethanol either directly from sugarcane juice or from molasses, including B-Heavy molasses, or both, as the cane may be, is manufactured;

ಮುಂದುವರಿದು, ಮೇಲ್ಕಂಡ ಪರಿಭಾಷೆಯನ್ನು ಬದಲಿಸಿ Sugarcane(Control) Amendment Order 2021 ಖಂಡ 2(a) (i) (c) ರಲ್ಲಿ, ಈ ಕೆಳಕಂಡ ಪರಿಭಾಷೆಯನ್ನು ಅಳವಡಿಸಲಾಗಿರುತ್ತದೆ.

> 'factory or sugar factory' means and premises including the precincts thereof in any part of which sugarcane is crushed and either sugar is manufactured by vacuum pan process or at its own option, ethanol is manufactured from sugarcane juice or sugar of sugar syrup or molasses, including B-Heavy molasses,

ಮೇಲ್ಕಂಡ ಪರಿಭಾಷೆಗಳ ಪ್ರಕಾರ ವ್ಯಾಕ್ಯೂಮ್ ಪಾನ್ ವಿಧಾನವನ್ನು ಅಳವಡಿಸಿಕೊಂಡು ಕಬ್ಬನ್ನು ನುರಿಸುವ ಕಾರ್ಖಾನೆಗಳನ್ನು/ಘಟಕಗಳನ್ನು ಸಕ್ಕರೆ ಕಾರ್ಖಾನೆ ಎಂದು ಪರಿಗಣಿಸಬೇಕಾಗುತ್ತದೆ. ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಮತ್ತು ಸಕ್ಕರೆ ತಂತ್ರಜ್ಞರು ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಇವರು ಸ್ಥಳ ಪರಿಶೀಲನೆ ನಡೆಸಿ ಸಲ್ಲಿಸಿರುವ ವರದಿಯಲ್ಲಿ ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಏಕೀಕೃತ ಘಟಕಗಳನ್ನು ಸಕ್ಕರೆಯ ತಯಾರಿಕೆಯ ಉಪಕರಣಗಳನ್ನು ಅಳವಡಿಸಿದ್ದು, ಅಂತಿಮ

ಮೊಲಾಸಿಸ್‌ನ್ನು ಸ್ಟೀಲ್ ಟ್ಯಾಂಕ್‌ಗಳಲ್ಲಿ ಶೇಖರಿಸಲಾಗಿದೆ ಎಂದು ವ್ಯಾಕ್ಯೂಮ್ ಪಾನ್ ವಿಧಾನದ ಮೂಲಕ ಕಡಿಮೆ ದರ್ಜೆಯ ಕಚ್ಚಾ ಸಕ್ಕರೆಯನ್ನು ಉತ್ಪಾದಿಸಲಾಗುತ್ತಿದೆ ಎಂದು ತಿಳಿಸಿರುವುದರಿಂದ, ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಏಕೀಕೃತ ಘಟಕಗಳನ್ನು Sugarcane(Control) Order 1966ರ ಖಂಡ 2(ಸಿ)ರ ಮತ್ತು Sugarcane(Control) Amendment Order 2021 ಖಂಡ 2(a) (i) (c) ಪರಿಭಾಷೆಗಳನ್ವಯ ಸಕ್ಕರೆ ಕಾರ್ಖಾನೆ ಎಂದು ಪರಿಗಣಿಸಬೇಕಾಗುತ್ತದೆ. Sugarcane(Control) Order 1966ರ ಖಂಡ 6(ಎ)ರನ್ವಯ ಒಂದು ಸಕ್ಕರೆ ಕಾರ್ಖಾನೆಯಿಂದ 15.00 ಕಿ.ಮೀ ಸುತ್ತಳತೆಯೊಳಗಡೆ ಮತ್ತೊಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸದಂತೆ ನಿರ್ಬಂಧಿಸಲಾಗಿರುತ್ತದೆ.

Sugarcane(control) Order, 1966 ರಲ್ಲಿನ ಖಂಡ 6 ರಲ್ಲಿ ಕಬ್ಬಿನ ಹಂಚಿಕೆ ಮತ್ತು ಸಾಗಾಣಿಕೆಯನ್ನು ಕೇಂದ್ರ ಸರ್ಕಾರವು ನಿಯಂತ್ರಿಸಬಹುದಾಗಿದ್ದು, Sugarcane(control) Order, 1966ರ ಖಂಡ 6, 7, 8, ಮತ್ತು 9 ರಲ್ಲಿನ ಅಧಿಕಾರವನ್ನು ಕೇಂದ್ರ ಸರ್ಕಾರವು ಅಧಿಸೂಚನೆ:G.S.R.1127/ Ess.Com/sugar, dated the 16th July 1966ರ ಮೂಲಕ ರಾಜ್ಯ ಸರ್ಕಾರಗಳಿಗೆ ಪ್ರತ್ಯಾಯೋಜಿಸಿರುತ್ತದೆ. ಸದರಿ ಅಧಿಕಾರ ಪ್ರತ್ಯಾಯೋಜನೆಯನ್ವಯ ಕರ್ನಾಟಕ ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ, ಸಕ್ಕರೆ ಕಾರ್ಖಾನೆಗಳ ಸಾಮರ್ಥ್ಯ ವಿಸ್ತರಣೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಮೀಸಲು ಕ್ಷೇತ್ರದ ಹಂಚಿಕೆ ಕುರಿತು ಅನುಸರಿಸಬೇಕಾದ ನೀತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ. ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಮೀಸಲು ಕ್ಷೇತ್ರದ ಹಂಚಿಕೆ ಕುರಿತು ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರ ಆದೇಶ ಭಾಗದ ಕ್ರಮ ಸಂಖ್ಯೆ:6ರಲ್ಲಿ ಈ ಕೆಳಕಂಡಂತೆ ನಿಯಮಿಸಲಾಗಿದೆ.

> "ಪ್ರಸಕ್ತ ಇರುವ ಸಕ್ಕರೆ ಕಾರ್ಖಾನೆಗೆ ಹಂಚಿಕೆ ಮಾಡಿರುವ ಹಳ್ಳಿಗಳನ್ನು ಹೊಸ ಸಕ್ಕರೆ ಕಾರ್ಖಾನೆಗೆ ಹಂಚಿಕೆ ಮಾಡಲು ಉದ್ದೇಶಿಸಿದಲ್ಲಿ ಅಂಥ ಪ್ರಸ್ತಾವನೆಗಳ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲು ಸಚಿವ ಸಂಪುಟದ ಮುಂದೆ ಮಂಡಿಸುವುದು".

ಮೇಲ್ಕಂಡ ಆದೇಶದನ್ವಯ, ಕಬ್ಬು ಮೀಸಲು ಕ್ಷೇತ್ರದ ಹಂಚಿಕೆ ಕುರಿತು ಹೊರಡಿಸಲಾಗುವ ಅಧಿಸೂಚನೆ/ಆದೇಶಗಳಲ್ಲಿ, ಕಬ್ಬು ಮೀಸಲು ಪ್ರದೇಶದ ಪ್ರತಿ ಕಬ್ಬು ಬೆಳೆಗಾರ ತಾನು ಬೆಳೆದ ಕಬ್ಬಿನ ಶೇ.95 ರಷ್ಟನ್ನು ಸಂಬಂಧಿಸಿದ ಸಕ್ಕರೆ ಕಾರ್ಖಾನೆಗೆ ನೇರವಾಗಿ ಅಥವಾ ಕಬ್ಬು ಬೆಳೆಗಾರರ ಸಹಕಾರಿ ಸಂಘದ ಮೂಲಕ ಸರಬರಾಜು ಮಾಡುವುದು ಎಂದು ಮತ್ತು ಕಬ್ಬು ಮೀಸಲು ಪ್ರದೇಶವನ್ನು ಹಂಚಿಕೆ ಮಾಡಲಾದ ಕಾರ್ಖಾನೆಗೆ ಹೊರತುಪಡಿಸಿ ಹೊರಗಿನ ಪ್ರದೇಶಕ್ಕೆ ಯಾವುದೇ ಕಾರಣಕ್ಕೂ ಜಿಲ್ಲಾಧಿಕಾರಿಗಳ ಆದೇಶವಿಲ್ಲದೆ ಸಾಗಣೆ ಮಾಡತಕ್ಕದ್ದಲ್ಲ ಎಂದು ಷರತ್ತು ವಿಧಿಸಲಾಗುತ್ತದೆ. ಈ ಷರತ್ತಿನಂತೆ, ಅಳಗವಾಡಿ ವೀರೇಶ್ವರ ಶುಗರ್ಸ್ ಪ್ರೈ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ– ಈ ಕಾರ್ಖಾನೆಗೆ ಹಂಚಿಕೆ ಮಾಡಲಾದ ಕಬ್ಬು ಮೀಸಲು ಕ್ಷೇತ್ರದಲ್ಲಿನ ಕಬ್ಬನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಬೆಳಗಾವಿ ಇವರ ಅನುಮತಿಯಿಲ್ಲದೇ ಬೇರೆ ಸಕ್ಕರೆ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡಲು ಅವಕಾಶವಿರುವುದಿಲ್ಲ.

ಕೇಂದ್ರ ಸರ್ಕಾರದ ಸಕ್ಕರೆ ಮತ್ತು ವನಸ್ಪತಿ ಎಣ್ಣೆಗಳ ನಿರ್ದೇಶನಾಲಯದ ಪತ್ರ ಸಂಖ್ಯೆ: F.No.3(2)/2023-SP, Dated:29.08.2024 ಈ ಕೆಳಕಂಡಂತೆ ನಿರ್ದೇಶಿಸಲಾಗಿದೆ.

> With reference to this Directorate Order of even No. dated:15.12.2023, I am directed to state that sugar mills and distilleries are allowed to produce ethanol from sugarcane juice/sugar syrup, B-Heavy Molasses as well as C-Heavy molasses during ESY 2024-25 as per the agreement/allocation with OMCs.

DFPD, in coordination with MoPNG, shall periodically review the diversion of sugar to ethanol production vis-à-vis the production of sugar in the country so that availability of sugar for domestic consumption is ensured throughout the year.

ಮುಂದುವರಿದು, ಕೇಂದ್ರ ಸರ್ಕಾರದ ಸಕ್ಕರೆ ಮತ್ತು ವನಸ್ಪತಿ ಎಣ್ಣೆಗಳ ನಿರ್ದೇಶನಾಲಯದ ಪತ್ರ ಸಂಖ್ಯೆ: F.No.3(2)/2023-SP, Dated:13.09.2024 ಈ ಕೆಳಕಂಡಂತೆ ನಿರ್ದೇಶಿಸಲಾಗಿದೆ.

I am directed to refer to this Directorate order No 3(2)/2023-SP 15.12.2023 regarding no use of sugarcane juice/ B-heavy molasses for manufacture of RS and ENA and to say that sugar mills and distilleries are allowed to manufacture RS and ENA from sugarcane juice.

ಮೇಲ್ಕಂಡ ಕೇಂದ್ರ ಸರ್ಕಾರದ ದಿನಾಂಕ:29.08.2024 ಮತ್ತು 13.09.2024ರ ಪತ್ರ/ಸುತ್ತೋಲೆಗಳಲ್ಲಿ, ಬೆಲ್ಲದ ಘಟಕಗಳಲ್ಲಿ ಕಬ್ಬಿನ ರಸ ಮತ್ತು ಸಿರಪ್ ಗಳನ್ನು ಉತ್ಪಾದಿಸುವ ಅಥವಾ ಮಾರಾಟ ಮಾಡುವ ವಿಷಯದ ಪ್ರಸ್ತಾಪವಿಲ್ಲದಿರುವುದನ್ನು ಗಮನಿಸಬಹುದಾಗಿದೆ.

ಅದೇ ರೀತಿ ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರಲ್ಲಿ, ಹಾಲಿ ಇರುವ ಸಕ್ಕರೆ ಕಾರ್ಖಾನೆಯ ಹಾಗೂ ಈಗಾಗಲೇ ಮಂಜೂರಾತಿಯನ್ನು ಪಡೆದು ಹೊಸದಾಗಿ ಸ್ಥಾಪಿಸಲು ಉದ್ದೇಶಿಸಿರುವ ಸಕ್ಕರೆ ಕಾರ್ಖಾನೆಯ 15.00 ಕಿ.ಮೀ ಸುತ್ತಳತೆಯೊಳಗಡೆ ಯಾವುದೇ ಹೊಸ ಸಕ್ಕರೆ ಕಾರ್ಖಾನೆಗೆ ಅನುಮತಿ ನೀಡದಿರುವ ನೀತಿಯನ್ನು ಅಳವಡಿಸಿಕೊಳ್ಳಲಾಗಿರುತ್ತದೆ. ಅಳಗವಾಡಿ ಬೀರೇಶ್ವರ ಶುಗರ್ಸ್ ಪ್ರೈ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ – ಈ ಕಾರ್ಖಾನೆಯು ದಿನಾಂಕ:07.07.2015ರಂದು ಕೇಂದ್ರ ಸರ್ಕಾರದಿಂದ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಐ.ಇ.ಎಂ. ಪಡೆದುಕೊಂಡಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರಲ್ಲಿ ಅಳವಡಿಸಿಕೊಂಡಿರುವ ನೀತಿಯನ್ವಯ ಅಳಗವಾಡಿ ಬೀರೇಶ್ವರ ಶುಗರ್ಸ್ ಪ್ರೈ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯ 15.00 ಕಿ.ಮೀ ಸುತ್ತಳತೆಯೊಳಗಡೆ ಇರುವ ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಏಕೀಕೃತ ಘಟಕಗಳಲ್ಲಿ ಕಬ್ಬಿನ ರಸ, ಸಿರಪ್ ಮತ್ತು ಕಚ್ಚಾ ಸಕ್ಕರೆಯನ್ನು ಉತ್ಪಾದಿಸುತ್ತಿರುವುದು Sugarcane(control) Order, 1966 ಮತ್ತು ತಿದ್ದುಪಡಿ ಆದೇಶಗಳು ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರ ಉಲ್ಲಂಘನೆಯಾಗಿರುತ್ತದೆ.

ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಮತ್ತು ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ:104198/2023 ಮತ್ತು ರಿಟ್ ಅರ್ಜಿ ಸಂಖ್ಯೆ: 106747/2023 ಗಳನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಧಾರವಾಡ ಪೀಠವು ದಿನಾಂಕ:03.12.2024ರಂದು ನೀಡಿದ ಆದೇಶದಲ್ಲಿ ವಜಾಗೊಳಿಸಿರುವುದರಿಂದ, ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಏಕೀಕೃತ ಘಟಕಗಳಲ್ಲಿ ಕಬ್ಬು ನುರಿಸುವುದನ್ನು ಮತ್ತು ಸಕ್ಕರೆ ಕಾರ್ಖಾನೆಯ ಕಾರ್ಯಾಚರಣೆಯನ್ನು ನಿಲ್ಲಿಸಲು ಮತ್ತು ಅದೇ ರೀತಿ ಎಥನಾಲ್ ಅನ್ನು ಉತ್ಪಾದಿಸುವುದಕ್ಕಾಗಿ ಕಬ್ಬು ನುರಿಸಲು ಕಬ್ಬಿನ ಖರೀದಿ ಹಾಗೂ ಸಂಗ್ರಹಣೆಯನ್ನು ಮಾಡುತ್ತಿರುವುದನ್ನು ನಿಲ್ಲಿಸುವಂತೆ ನಿರ್ದೇಶಿಸಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಹೊರಡಿಸಿದ ದಿನಾಂಕ:30.05.2023 ಮತ್ತು 21.10.2023ರ ಆದೇಶಗಳು ಮರು ಚಾಲ್ತಿಗೆ ಬಂದಂತೆ ಆಗುತ್ತವೆ.

ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಮತ್ತು ಸಕ್ಕರೆ ತಂತ್ರಜ್ಞರು ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ ಇವರು ಸ್ಥಳ ಪರಿಶೀಲನೆ ನಡೆಸಿ ಸಲ್ಲಿಸಿರುವ ವರದಿಯಲ್ಲಿ ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಏಕೀಕೃತ ಘಟಕಗಳಲ್ಲಿ ಸಕ್ಕರೆಯ ತಯಾರಿಕೆಯ ಉಪಕರಣಗಳನ್ನು ಅಳವಡಿಸಿದ್ದು, ಅಂತಿಮ ಮೊಲಾಸಿಸ್ ಅನ್ನು ಸ್ಟೀಲ್ ಟ್ಯಾಂಕ್‌ಗಳಲ್ಲಿ ಶೇಖರಿಸಲಾಗಿದೆ ಎಂದು ವ್ಯಾಕ್ಯೂಮ್ ಪಾನ್ ವಿಧಾನದ ಮೂಲಕ ಕಡಿಮೆ ದರ್ಜೆಯ ಕಚ್ಚಾ ಸಕ್ಕರೆಯನ್ನು ಉತ್ಪಾದಿಸಲಾಗುತ್ತಿದೆ ಎಂದು ತಿಳಿಸಿರುವುದರಿಂದ ಮತ್ತು ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಏಕೀಕೃತ ಘಟಕವು ಅಳಗವಾಡಿ ಬೀರೇಶ್ವರ ಶುಗರ್ಸ್ ಪ್ರೈ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯಿಂದ 15.00 ಕಿ.ಮೀ ಸುತ್ತಳತೆಯೊಳಗಡೆ ಇರುವುದರಿಂದ Sugarcane(Control) Order 1966ರ ಮತ್ತು ತಿದ್ದುಪಡಿ ಆದೇಶಗಳ ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರಲ್ಲಿ ಅಳವಡಿಸಿಕೊಂಡಿರುವ ನೀತಿಯ ಸ್ಪಷ್ಟ ಉಲ್ಲಂಘನೆಯಾದಂತೆ ಆಗುತ್ತದೆ. ಈ ರೀತಿ Sugarcane(Control) Order 1966ರ ಮತ್ತು ತಿದ್ದುಪಡಿ ಆದೇಶಗಳ ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರಲ್ಲಿ ಅಳವಡಿಸಿಕೊಂಡಿರುವ ನೀತಿಯ ಉಲ್ಲಂಘನೆಯ ಪ್ರಕರಣಗಳು ಬೇರೆ ಪ್ರಕರಣಗಳಿಗೆ ಪೂರ್ವ ನಿದರ್ಶನವಾಗುವ ಸಂಭವವಿರುವುದರಿಂದ, ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳ/ಎಥನಾಲ್ ಘಟಕಗಳ ಹಿತಾಸಕ್ತಿಯನ್ನು ಮತ್ತು ಈ ಕಾರ್ಖಾನೆಗಳನ್ನು ನಂಬಿರುವ ರೈತರ/ಕಾರ್ಮಿಕರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ. ಮೇಲ್ಕಂಡ ವಿವರಣೆಯ ಹಿನ್ನೆಲೆಯಲ್ಲಿ ಸದರಿ ಪ್ರಕರಣವನ್ನು ಸರ್ಕಾರವು ಕೂಲಕಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಸಿಐ 311 ಎಸ್‌ಜಿಎಫ್ 2024</u>
<u>ಬೆಂಗಳೂರು, ದಿನಾಂಕ:04.01.2025</u>

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಈ ಘಟಕದಲ್ಲಿ ಕಬ್ಬಿನ ರಸದಿಂದ ಬೆಲ್ಲವನ್ನು ಉತ್ಪಾದಿಸಿದಲ್ಲಿ ಶುಗರ್ ಕೇನ್ (ಕಂಟ್ರೋಲ್) ಆರ್ಡರ್ 1966 ಮತ್ತು ತಿದ್ದುಪಡಿ ಆದೇಶಗಳು ಅನ್ವಯಿಸುವುದಿಲ್ಲ.

ಆದರೆ, ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಘಟಕಗಳಲ್ಲಿ ವ್ಯಾಕ್ಯೂಮ್ ಪಾನ್ ವಿಧಾನದ ಮೂಲಕ ಕಡಿಮೆ ದರ್ಜೆಯ ಕಚ್ಚಾ ಸಕ್ಕರೆಯನ್ನು ಅಥವಾ ಕಬ್ಬಿನ ರಸವನ್ನು ಮಾರ್ಗಾಂತರ ಮಾಡಿ ಇನ್ನಾವುದೇ ಉತ್ಪನ್ನಗಳನ್ನು ಉತ್ಪಾದಿಸಿದಲ್ಲಿ ಶುಗರ್ ಕೇನ್ (ಕಂಟ್ರೋಲ್) ಆರ್ಡರ್ 1966 ಮತ್ತು ತಿದ್ದುಪಡಿ ಆದೇಶಗಳು ಅನ್ವಯಿಸುತ್ತವೆ. ಆದ್ದರಿಂದ, ಶುಗರ್ ಕೇನ್ (ಕಂಟ್ರೋಲ್) ಆರ್ಡರ್ 1966ರ ಖಂಡ 6, 7, ಮತ್ತು 8 ರಲ್ಲಿ ಮತ್ತು ಶುಗರ್ ಕೇನ್ (ಕಂಟ್ರೋಲ್) (ಅಮೆಂಡ್‌ಮೆಂಟ್) ಆರ್ಡರ್ 2006ರ ಖಂಡ 6 ಎ ರಲ್ಲಿ ಮತ್ತು ಸರ್ಕಾರದ ಆದೇಶ ಸಂಖ್ಯೆ:ಸಿಐ 187 ಎಸ್‌ಜಿಎಫ್ 2007, ದಿನಾಂಕ:11.09.2007ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಬ್ರಹ್ಮಾನಂದ ಸಾಗರ್ ಜಾಗರಿ ಇಂಡಸ್ಟ್ರೀಸ್ ಮತ್ತು ಆಸ್ಕೀನ್ಸ್ ಬಯೋಪ್ಯೂಯಲ್ಸ್ ಲಿ., ಅಳಗವಾಡಿ ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಘಟಕಗಳಲ್ಲಿ ವ್ಯಾಕ್ಯೂಮ್ ಪಾನ್ ವಿಧಾನದ ಮೂಲಕ ಕಡಿಮೆ ದರ್ಜೆಯ ಕಚ್ಚಾ ಸಕ್ಕರೆಯನ್ನು ಅಥವಾ ಕಬ್ಬಿನ ರಸವನ್ನು ಮಾರ್ಗಾಂತರ ಮಾಡಿ ಇನ್ನಾವುದೇ ಉತ್ಪನ್ನಗಳನ್ನು ಉತ್ಪಾದಿಸುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇದಿಸಿ ಆದೇಶಿಸಿದೆ.

ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರು ಈ ಆದೇಶದ ಅನುಷ್ಠಾನವನ್ನು ಖಾತರಿಪಡಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ನೀಡಿರುವ ಅನುಮೋದನೆ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-166

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ, ತುಮಕೂರು ಕಂದಾಯ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಶ್ರೀ ಜಯಪ್ರಕಾಶ್, ಸಾಮಾಜಿಕ ಹೋರಾಟಗಾರ, ಗುಬ್ಬಿ, ತುಮಕೂರು ಜಿಲ್ಲೆ ಇವರು ಸಲ್ಲಿಸಿರುವ ದೂರು ಅರ್ಜಿ.

ಓದಲಾಗಿದೆ:

1) ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ ಇವರ ವಿರುದ್ಧ ಶ್ರೀ ಜಯಪ್ರಕಾಶ್, ಸಾಮಾಜಿ ಹೋರಾಟಗಾರ, ಗುಬ್ಬಿ, ತುಮಕೂರು ಜಿಲ್ಲೆ ಇವರಿಂದ ಸ್ವೀಕೃತವಾಗಿರುವ ದಿನಾಂಕ : 08-01-2024 ರ ದೂರು ಅರ್ಜಿ.
2) ಸರ್ಕಾರದ ನೋಟಿಸ್ ಸಂಖ್ಯೆ: ಲಾ-ಎಲ್‌ಸಿಎಲ್/38/2024, ದಿನಾಂಕ : 13-02-2024.
3) ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ, ತುಮಕೂರು ಕಂದಾಯ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಸಲ್ಲಿಸಿರುವ ದಿನಾಂಕ : 29-02-2024ರ ಲಿಖಿತ ಹೇಳಿಕೆ.
4) ಸರ್ಕಾರದ ಪತ್ರ ಸಂಖ್ಯೆ: ಲಾ-ಎಲ್‌ಸಿಎಲ್/38/2024, ದಿನಾಂಕ : 11-09-2024.
5) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು ಜಿಲ್ಲೆ ಇವರ ಪತ್ರ ಸಂಖ್ಯೆ: 4800/2024, ದಿನಾಂಕ : 05-11-2024.

ಪ್ರಸ್ತಾವನೆ:

ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ, ತುಮಕೂರು ಕಂದಾಯ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಶ್ರೀ ಜಯಪ್ರಕಾಶ್, ಸಾಮಾಜಿಕ ಹೋರಾಟಗಾರ, ಗುಬ್ಬಿ, ತುಮಕೂರು ಜಿಲ್ಲೆ ಇವರು ದೂರು ಅರ್ಜಿ ಸಲ್ಲಿಸಿರುತ್ತಾರೆ. ದೂರು ಅರ್ಜಿಯಲ್ಲಿ ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ ಇವರು ನೋಟರಿ ರಿನೀವಲ್ ಇಲ್ಲದೇ ನೋಟರಿ ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಹಾಗೂ ಪ್ರಮಾಣಕರ್ತರ / Deponent ನ ಸಹಿ ಇಲ್ಲದೇ ಪ್ರಮಾಣೀಕರಿಸಿರುವುದಾಗಿ ಆರೋಪಿಸಿ, ಆರೋಪಗಳಿಗೆ ಸಂಬಂಧಿಸಿದಂತೆ 2 ಮೂಲ ದಾಖಲೆಗಳನ್ನು ಕಳುಹಿಸಿ, ಸದರಿಯವರ ವಿರುದ್ಧ **suo motu** ವಿಚಾರಣೆ ನಡೆಸಿ, ನಿಯಮಗಳನ್ವಯ ಕ್ರಮಕ್ಕೈಗೊಳ್ಳುವಂತೆ ಕೋರಿರುತ್ತಾರೆ.

ಮೇಲಿನ ದೂರು ಅರ್ಜಿ ಮತ್ತು ಪೂರಕ ದಾಖಲೆಯನ್ನು ಪರಿಶೀಲಿಸಿ, ನೋಟರಿ ನಿಯಮಗಳು, 1956ರ ನಿಯಮ 13 (1) ರನ್ವಯ ಸದರಿ ದೂರು ಅರ್ಜಿಯನ್ನು suo motu ಎಂದು ಪರಿಗಣಿಸಿ, ಮೇಲೆ ಓದಲಾದ ಕ್ರಮ ಸಂಖ್ಯೆ: **(2)**ರ ದಿನಾಂಕ : 13-02-2024ರ ನೋಟೀಸ್‌ನ್ನು ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ ಇವರಿಗೆ ಜಾರಿ ಮಾಡಲಾಗಿತ್ತು. ನೋಟರಿ ನಿಯಮಗಳು, 1952ರ ನಿಯಮ 13(5)ರನ್ವಯ ನೋಟೀಸ್ ತಲುಪಿದ 14 ದಿನಗಳೊಳಗಾಗಿ ನ್ಯಾಯಾಲಯದಲ್ಲಿ Written Statement ಸಲ್ಲಿಸುವ ವಿಧಾನದಲ್ಲಿ ತಮ್ಮ ಲಿಖಿತ ತಕರಾರನ್ನು verify ಮಾಡಿ (ಪ್ರಮಾಣೀಕರಿಸಿ) ಉತ್ತರವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: **(3)** ರ ದಿನಾಂಕ : 29-02-2024 ರಂದು ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ, ಇವರು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : **(4)**ರ ದಿನಾಂಕ : 11-09-2024ರ ಪತ್ರದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 81 ಎಲ್‌ಸಿಎಲ್ 2013, ದಿನಾಂಕ : 22-11-2018 ರನ್ವಯ ಆಯಾ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು / ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರನ್ನು **"ಸಕ್ಷಮ ಪ್ರಾಧಿಕಾರ"** ಎಂದು ಪದನಾಮೀಕರಿಸಲಾಗಿರುವುದರಿಂದ, ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ ಇವರ ವಿರುದ್ಧ ಸ್ವೀಕೃತವಾಗಿರುವ ದೂರು ಅರ್ಜಿಯ ಪ್ರತಿ ಮತ್ತು ಪೂರಕ ದಾಖಲೆಯ ಮೂಲ ಪ್ರತಿಗಳನ್ನು ಹಾಗೂ ಸದರಿ ನೋಟರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯ ಪ್ರತಿಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಜಿಲ್ಲೆ ಇವರಿಗೆ ಕಳುಹಿಸಿ, ನೋಟರಿ ನಿಯಮಗಳು, 1956ರ ನಿಯಮ 13(8) ರನ್ವಯ ನಿಯಮಾನುಸಾರ ಸೂಕ್ತ ವಿಚಾರಣೆ ನಡೆಸಿ, ಸದರಿ ನಿಯಮದ ಉಪನಿಯಮಗಳನ್ವಯ ಉಭಯ ಪಕ್ಷಕಾರರಿಗೆ ತಮ್ಮ ಪ್ರಕರಣವನ್ನು ಅಥವಾ ತಕರಾರಿನಲ್ಲಿರುವ ಅಂಶಗಳನ್ನು ಸಾಬೀತುಪಡಿಸಲು ಅವಕಾಶ ನೀಡಿ, ನೋಟರಿ ನಿಯಮಗಳು, 1956ರ ನಿಯಮ 13 (11) ರನ್ವಯ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಿ ಕೊಡುವಂತೆ ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: **(5)** ರ 05-11-2024 ರ ಪತ್ರದಲ್ಲಿ ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ ಇವರ ವಿರುದ್ಧದ ದೂರಿನ ಬಗ್ಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಜಿಲ್ಲೆ ಇವರು ವಿಚಾರಣೆ ನಡೆಸಿ, ವಿಚಾರಣಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ದೂರುದಾರರಿಗೆ ನೋಟಿಸು ಜಾರಿಯಾಗದ ಕಾರಣ ಮತ್ತು ದೂರುದಾರರು ದೂರಿನಲ್ಲಿ ಸಂಪೂರ್ಣ ವಿಳಾಸವನ್ನು ಬರೆಯದ ಕಾರಣ, ದೂರುದಾರರಿಂದ ಸಮಜಾಯಿಷಿಯನ್ನು ಪಡೆಯಲು ಸಾಧ್ಯವಾಗಿರುವುದಿಲ್ಲವಾದ್ದರಿಂದ, ದೂರು ಅರ್ಜಿಯನ್ನು ಮುಕ್ತಾಯಗೊಳಿಸಬಹುದಾಗಿದೆ ಎಂದು ಹಾಗೂ ನೋಟರಿ ವಕೀಲರಾದ ಶ್ರೀಮತಿ ಭಾರತಿ ಟಿ. ಎನ್. ಇವರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು ಜಿಲ್ಲೆ ಇವರು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸಿ, ನೋಟರಿಗಳ ನಿಯಮಗಳು 1956ರ ನಿಯಮ 13(12)(b)(ii)ರನ್ವಯ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ-ಎಲ್‌ಸಿಎಲ್/38/2024,
ಬೆಂಗಳೂರು, ದಿನಾಂಕ : 07-08-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಟಿ. ಎನ್. ಭಾರತಿ, ವಕೀಲರು ಮತ್ತು ನೋಟರಿ, ತುಮಕೂರು ಕಂದಾಯ ತಾಲ್ಲೂಕು, ತುಮಕೂರು ಜಿಲ್ಲೆ ಇವರು ನೋಟರಿ ವೃತ್ತಿಯಲ್ಲಿ ಕರ್ತವ್ಯಲೋಪವೆಸಗಿರುವುದರಿಂದ ನೋಟರಿಗಳ ನಿಯಮಗಳು, 1956ರ ನಿಯಮ 13(12)(b)(ii)ರನ್ವಯ ಈ ಆದೇಶ ಹೊರಡಿಸಿದ ದಿನಾಂಕದಿಂದ ಆರು (06) ತಿಂಗಳ ಅವಧಿಗೆ ನೋಟರಿ ಪ್ರಾಕ್ಟೀಸ್ (ನೋಟರಿ ವೃತ್ತಿ) ಮಾಡದಂತೆ ಅಮಾನತ್ತಿನಲ್ಲಿರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-167

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಮತ್ತು ನೋಟರಿ, ಗುಡಿಬಂಡೆ ಕಂದಾಯ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರನ್ನು ನೋಟರಿಯನ್ನಾಗಿ ಮರು ನೇಮಕ ಮಾಡುವ ಬಗ್ಗೆ.

ಓದಲಾಗಿದೆ:- (1) ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/50/2021, ದಿನಾಂಕ : 09-01-2023

(2) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿದ್ದ W.P.No. 5625/2023 (GM-RES) ರಲ್ಲಿ ದಿನಾಂಕ : 30-09-2024 ರಂದು ನೀಡಿದ ಆದೇಶ.

(3) ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಇವರು ಸಲ್ಲಿಸಿರುವ ದಿನಾಂಕ : 10-01-2025ರ ಪತ್ರ.

* * * * *

ಪ್ರಸ್ತಾವನೆ:

ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಮತ್ತು ನೋಟರಿ, ಗುಡಿಬಂಡೆ ಕಂದಾಯ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ವಿರುದ್ಧ ಶ್ರೀ ಜಿ. ಎಂ. ಶ್ರೀನಿವಾಸ ಬಿನ್ ಲೇಟ್ ಮುನಿವೆಂಕಟಸ್ವಾಮಿ, ಗೌರಿಬಿದನೂರು ಟೌನ್ ಇವರು ದಿನಾಂಕ : 30-12-2020 ರಂದು ದೂರು ಅರ್ಜಿ ಸಲ್ಲಿಸಿದ್ದು, ಸದರಿ ದೂರು ಅರ್ಜಿಯಲ್ಲಿನ ಆರೋಪಗಳ ಮೇಲೆ ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಮತ್ತು ನೋಟರಿ ಇವರಿಗೆ ನೋಟಿಸ್ ಜಾರಿಮಾಡಿದ್ದು, ಸದರಿ ನೋಟರಿಯವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ, ನೋಟರಿಯವರ ವಿರುದ್ಧದ ದೂರು ಅರ್ಜಿಯಲ್ಲಿನ ಆರೋಪಗಳನ್ನು ನಿಯಮಾನುಸಾರ ಸೂಕ್ತ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಕೋರಲಾಗಿತ್ತು. ಅದರಂತೆ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಅಂತಿಮವಾಗಿ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ದಿನಾಂಕ : 19-08-2021 ರಂದು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ನೋಟರಿಯವರು ನೋಟರಿ ವೃತ್ತಿಯಲ್ಲಿ ದುರ್ನಡತೆ ಹಾಗೂ ಕರ್ತವ್ಯ ಲೋಪವೆಸಗಿರುವುದಾಗಿ ವರದಿ ಮಾಡಲಾಗಿದೆ. ಸದರಿ ವರದಿಯನ್ನು ಅಂಗೀಕರಿಸಿ, ನೋಟರಿ ನಿಯಮಗಳು, 1956ರ ನಿಯಮ 13 (12)(b)(i) ರನ್ವಯ ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಮತ್ತು ನೋಟರಿ ಇವರಿಗೆ ನೀಡಲಾದ ನೋಟರಿ ವೃತ್ತಿ ಪ್ರಮಾಣ ಪತ್ರವನ್ನು ರದ್ದುಪಡಿಸಿ ಮತ್ತು ನೋಟರಿ ಕರ್ತವ್ಯ ನಿರ್ವಹಣೆಯಿಂದ ನಿರಂತರವಾಗಿ ತಡೆಯಲಾಗಿದೆ ಎಂದು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 09-01-2023ರ ಆದೇಶದಲ್ಲಿ ಆದೇಶಿಸಲಾಗಿತ್ತು.

ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಮತ್ತು ನೋಟರಿ ಇವರು ಸರ್ಕಾರದ ದಿನಾಂಕ : 09-01-2023ರ ಆದೇಶವನ್ನು quash ಮಾಡುವಂತೆ ಮತ್ತು ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಲ್ಲಿ ಮರು ನೋಂದಾಯಿಸಿ, ಪ್ರಮಾಣ ಪತ್ರವನ್ನು ನವೀಕರಿಸಲು ಕೋರಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಪೆಟಿಷನ್ ಸಂಖ್ಯೆ: W P No. 5625/2023 (GM RES) ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಪ್ರಕರಣವನ್ನು ವಿಚಾರಣೆ ನಡೆಸಿ ದಿನಾಂಕ : 30-08-2024 ರಂದು ಮೇಲೆ ಓದಲಾದ ಕ್ರಮ ಸಂಖ್ಯೆ: (2)ರಲ್ಲಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

ORDER

i. Writ petition is allowed-in-part.
ii. The order dated 09-01-2003 is partly modified.
iii. The penalty imposed under order dated 09-01-2003 is substituted with the warning to the petitioner not to involve in any irregularities under the Notaries Act in future.

iv. The petitioner is further imposed cost of Rs. 20,000/-. The cost shall be paid to Taluka Legal Services Authority, Gudibande. The cost shall be deposited within four weeks from today.
v. Acknowledgement for payment of cost shall be produced before the court.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಪತ್ರದಲ್ಲಿ ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿದ್ದ W.P. No. 5625/2023 ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ : 30-08-2024ರ ಆದೇಶದನ್ವಯ ಕಾನೂನು ಸೇವಾ ಸಮಿತಿ, ಗುಡಿಬಂಡೆ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ರೂ. 20,000/- ಗಳನ್ನು ಪಾವತಿಸಿ, ಸ್ವೀಕರಿಸಿದ ಬಗ್ಗೆ ರಸೀದಿಯ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಿ, ಸದರಿಯವರ ಹೆಸರನ್ನು ನೋಟರಿ ರಿಜಿಸ್ಟರ್‌ನಲ್ಲಿ ಮರು ನೋಂದಾಯಿಸಲು ಹಾಗೂ ನವೀಕರಿಸಿದ ನೋಟರಿ ವೃತ್ತಿ ಪ್ರಮಾಣ ಪತ್ರವನ್ನು ವಿತರಿಸುವಂತೆ ಕೋರಿರುತ್ತಾರೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿದ್ದ W.P. No. 5625/2023 ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ : 30-08-2024 ರಂದು ನೀಡಿರುವ ಆದೇಶದನ್ವಯ ಹಾಗೂ ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಇವರು ಈಗಾಗಲೇ ದಂಡ ರೂ. 20,000/- ಗಳನ್ನು ಕಾನೂನು ಸೇವಾ ಸಮಿತಿ, ಗುಡಿಬಂಡೆ ಇಲ್ಲಿ ಪಾವತಿಸಿರುವುದನ್ನು ಸರ್ಕಾರವು ಪರಿಗಣಿಸಿ, ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಇವರಿಗೆ ಈಗಾಗಲೇ ಸರ್ಕಾರದ ದಿನಾಂಕ : 09-01-2023ರ ಆದೇಶದಲ್ಲಿ ವಿಧಿಸಿರುವ ದಂಡನೆಯನ್ನು ಮಾರ್ಪಡಿಸಿ, ಇನ್ನು ಮುಂದೆ ನೋಟರಿ ಕಾಯ್ದೆಯಡಿ ಯಾವುದೇ ಅಕ್ರಮಗಳಲ್ಲಿ ಭಾಗಿಯಾಗದಂತೆ ಇರುವ ಬಗ್ಗೆ ಎಚ್ಚರಿಕೆ ನೀಡಲು ಹಾಗೂ ಸದರಿಯವರನ್ನು ನೋಟರಿಯಾಗಿ ಮುಂದುವರೆಸಲು ಮತ್ತು ನೋಟರಿಯವರು ಕರ್ತವ್ಯ ನಿರ್ವಹಿಸದೇ ಇರುವ ನಿರ್ದಿಷ್ಟ ಅವಧಿಯನ್ನು ಅಮಾನತ್ತಿನಲ್ಲಿರಿಸಿದ ಅವಧಿಯೆಂದು ಪರಿಗಣಿಸಲು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ-ಎಲ್‌ಸಿಎಲ್/50/2021,
ಬೆಂಗಳೂರು, ದಿನಾಂಕ : 07-08-2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಾಗಿದ್ದ W.P. No. 5625/2023 ರ ಪ್ರಕರಣದಲ್ಲಿ ದಿನಾಂಕ : 30-08-2024ರಂದು ನೀಡಿರುವ ಆದೇಶದನ್ವಯ ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಮತ್ತು ನೋಟರಿ, ಗುಡಿಬಂಡೆ ಕಂದಾಯ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಸಿಎಲ್/50/2021, ದಿನಾಂಕ : 09-01-2023 ರಲ್ಲಿ ವಿಧಿಸಿರುವ ದಂಡನೆಯನ್ನು ಮಾರ್ಪಡಿಸಿ, ಸದರಿ ನೋಟರಿಯವರು ಇನ್ನು ಮುಂದೆ ನೋಟರಿ ಕಾಯ್ದಯಡಿ ಯಾವುದೇ ಅಕ್ರಮಗಳಲ್ಲಿ ಭಾಗಿಯಾಗದಂತೆ ಎಚ್ಚರಿಕೆ ನೀಡಿ ಗುಡಿಬಂಡೆ ಕಂದಾಯ ತಾಲ್ಲೂಕಿನ ನೋಟರಿಯಾಗಿ ಮರುನೇಮಿಸಲಾಗಿದೆ. ಸದರಿಯವರು ನೋಟರಿ ಕರ್ತವ್ಯವನ್ನು ನವೀಕರಿಸಿದ ನೋಟರಿ ವೃತ್ತಿ ಪ್ರಮಾಣ ಪತ್ರ ವಿತರಿಸಿದ ದಿನಾಂಕದಿಂದ ನಿರ್ವಹಿಸಲು ಆದೇಶಿಸಲಾಗಿದೆ.

ಮುಂದುವರೆದು, ಶ್ರೀ ಎ. ರಾಮನಾಥ ರೆಡ್ಡಿ, ವಕೀಲರು ಮತ್ತು ನೋಟರಿ ಇವರು ದಿನಾಂಕ : 09-01-2023 ರಿಂದ ಈ ಆದೇಶದ ದಿನಾಂಕದವರೆಗೂ ನೋಟರಿಯಾಗಿ ಕರ್ತವ್ಯ ನಿರ್ವಹಿಸದೇ ಇರುವ ಅವಧಿಯನ್ನು ಅಮಾನತ್ತಿನಲ್ಲಿರಿಸಿದ ಅವಧಿಯೆಂದು ಪರಿಗಣಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು, ನ್ಯಾಯ ಮತ್ತು
ಮನವ ಹಕ್ಕುಗಳ ಇಲಾಖೆ (ಆಡಳಿತ-2).

PR-168

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಎಂ.ಕೆ ಹುಬ್ಬಳ್ಳಿ, ಕಿತ್ತೂರು ತಾಲ್ಲೂಕು, ಬೆಳಗಾವಿ ಜಿಲ್ಲೆ – ಈ ಕಾರ್ಖಾನೆಯಲ್ಲಿ ನಡೆದಿವೆ ಎನ್ನಲಾದ ನಿಯಮಬಾಹಿರ ಚಟುವಟಿಕೆಗಳು ಮತ್ತು ಅವ್ಯವಹಾರಗಳ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ:

1. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ:ಡಿಎಸ್‌ಕೆ/ ಸಿಓಎಫ್/45/2021-22/811, ದಿನಾಂಕ:30.11.2022.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ ರವರ ಆದೇಶ ಸಂಖ್ಯೆ:ಸಿಒ 01 ಸಿಎಪಿ 2023, ದಿನಾಂಕ:10.02.2023.
3. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ ಸಿಓಎಫ್/45/2021-22, ದಿನಾಂಕ:27.12.2023.
4. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ, ಇವರ ಸಕ್ಷಮದ ಪುನರ್ ಪರಿಶೀಲನಾ ಆದೇಶ ಸಂಖ್ಯೆ: ಸಿಒ 01 ಸಿಎಪಿ 2023, ದಿನಾಂಕ:29.06.2024.
5. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ ಸಿಓಎಫ್/45/2021-22/709, ದಿನಾಂಕ:16.07.2023.
6. ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:29.08.2024ರಂದು ನಡೆದ ಸಭಾ ನಡವಳಿಗಳು.
7. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ ಸಿಓಎಫ್/45/2021-22/1916, ದಿನಾಂಕ:03.01.2025, ದಿನಾಂಕ:04.01.2025, ದಿನಾಂಕ:02.02.2025, ದಿನಾಂಕ:06.02.2025, ದಿನಾಂಕ:07.02.2025 ಮತ್ತು ದಿನಾಂಕ:25.03.2025.

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ.ಹುಬ್ಬಳ್ಳಿ, ಕಿತ್ತೂರು ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ವಿವಿಧ ಅವ್ಯವಹಾರಗಳ ಬಗ್ಗೆ ಸ್ಥಳೀಯ ರೈತ ಸಂಘಟನೆಗಳು/ ರೈತ ಮುಖಂಡರು/ ರೈತರು ನೀಡಿದ ದೂರುಗಳ ಹಿನ್ನೆಲೆಯಲ್ಲಿ, ನಿಯಮಾನುಸಾರ ಸದರಿ ಕಾರ್ಖಾನೆಯ ಆಡಳಿತ ಮಂಡಳಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಿ ಪರಿಶೀಲಿಸಿ, ನಿಗಧಿತ ಆರೋಪಗಳ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64 ರಡಿಯಲ್ಲಿ ವಿಚಾರಣಾಧಿಕಾರಿಗಳನ್ನು ನೇಮಿಸಿ, ವಿಚಾರಣೆ ನಡೆಸಲು 90 ದಿನಗಳ ಕಾಲಾವಧಿಯನ್ನು ನಿಗದಿಗೊಳಿಸಿ, ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಆದೇಶ ಹೊರಡಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶದಲ್ಲಿ ಈ ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:30.11.2022ರ ಆದೇಶದಲ್ಲಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿರುವುದಕ್ಕೆ ತಡೆಯಾಜ್ಞೆಯನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಪತ್ರದಲ್ಲಿ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ನೇಮಿಸಿದ್ದ ವಿಚಾರಣೆಗೆ ಸಹಕಾರ ಇಲಾಖೆಯ ಆದೇಶದಲ್ಲಿ ತಡೆಯಾಜ್ಞೆಯನ್ನು ನೀಡಿರುವುದನ್ನು ಹಿಂದಕ್ಕೆ ಪಡೆದು, ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲು ಅನುವು ಮಾಡಿಕೊಡುವಂತೆ ಸಹಕಾರ ಇಲಾಖೆಯನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಆದೇಶದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:30.11.2022ರ ಆದೇಶದಲ್ಲಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿರುವುದನ್ನು ರದ್ದುಗೊಳಿಸಿ ಆದೇಶಿಸಲಾಗಿರುತ್ತದೆ. ಮುಂದುವರೆದು, ಮೇಲಿನ ಕ್ರಮ ಸಂಖ್ಯೆ(5)ರ ಪತ್ರದಲ್ಲಿ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ಅಥವಾ ಉಪ ಲೋಕಾಯುಕ್ತರ ವಿಚಾರಣೆ ನಡೆಸಲು ಪ್ರಕರಣವನ್ನು ವರ್ಗಾಯಿಸಲು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(6)ರ ಸಭಾ ನಡವಳಿಯಲ್ಲಿ, ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, -ಈ ಕಾರ್ಖಾನೆಯಲ್ಲಿ 2018-19 ರಿಂದ 2022-23ನೇ ಸಾಲುಗಳಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ನಿವೃತ್ತ ನ್ಯಾಯಾಧೀಶರು ಅಥವಾ ಉಪ ಲೋಕಾಯುಕ್ತರಿಂದ ವಿಚಾರಣೆ ನಡೆಸುವ ಕುರಿತು ದೂರುದಾರರ ಪ್ರತಿಯೊಂದು ಆರೋಪಗಳಲ್ಲಿನ ಅಂಶಗಳನ್ನು ಸಂಬಂಧಿಸಿದ ನಿಯಮಗಳನ್ವಯ ತಾಂತ್ರಿಕ ಅಂಶಗಳೊಂದಿಗೆ ಪರಿಶೀಲಿಸಿ, ವಾಸ್ತವಾಂಶವುಳ್ಳ ವರದಿಯೊಂದಿಗೆ ಸ್ಪಷ್ಟವಾದ ಆರೋಪ ಪಟ್ಟಿಯನ್ನು ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(7)ರ ಪತ್ರಗಳಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, ಕಿತ್ತೂರು ತಾಲ್ಲೂಕು, ಬೆಳಗಾವಿ ಜಿಲ್ಲೆ, ಈ ಕಾರ್ಖಾನೆಯಲ್ಲಿ ಸಕ್ಕರೆ ಮಾರಾಟ ಹಾಗೂ ಸಂಗ್ರಹ ಸಾಮಗ್ರಿಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಹಣ ದುರ್ಬಳಕೆ ಹಾಗೂ ಭ್ರಷ್ಟಾಚಾರಗಳ ಕುರಿತು ಪ್ರಸ್ತಾಪಿಸಿರುತ್ತಾರೆ. ದಿನಾಂಕ:04.01.2025ರ ಪತ್ರದಲ್ಲಿ, ಸುಮಾರು 11 ದೂರು ಅಂಶಗಳನ್ನು ಪ್ರಸ್ತಾಪಿಸಿರುತ್ತಾರೆ. ಮುಂದುವರೆದು, ಸದರಿ ಅಂಶಗಳಿಗೆ ಕಾರಣ ಕೇಳಿ ನೋಟೀಸ್ ನಿಡಿದ್ದಾಗ್ಯೂ ಸದರಿಯವರು ವಿಚಾರಣೆಗೆ ಹಾಜರಾಗಿರುವುದಿಲ್ಲವೆಂದು ತಿಳಿಸುತ್ತಾ, ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ಸದರಿಯವರಗಳ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಕೋರಿರುವುದಾಗಿ ತಿಳಿಸುತ್ತಾ, ಮಾಜಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಿರೇಶ್ ಹುಲಿಕಟ್ಟಿ ಹಾಗೂ ಮಾಜಿ ಮಾರಾಟ ಪ್ರಬಂಧಕರ ಮತ್ತು ಗೋಧಾಮು ಪಾಲಕರಾದ ಶ್ರೀ ಕಾಳಪ್ಪ ಭೀಮಪ್ಪ ಬಡಿಗೇರ್ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ತನಿಖೆಗೆ ಒಳಪಡಿಸಲು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳು ಹಾಗೂ ಆ ಭಾಗದ ಕಬ್ಬು ಬೆಳೆಯುವ ರೈತರು, ರೈತ ಮುಖಂಡರು, ವಿವಿಧ ರೈತರ ಪರ ಸಂಘಟನೆಗಳು ನೀಡಿರುವ ದೂರುಗಳಲ್ಲಿ ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ.ಹುಬ್ಬಳ್ಳಿ ಕಿತ್ತೂರು ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯಲ್ಲಿ 2018-19 ರಿಂದ 2022-23ನೇ ಸಾಲುಗಳಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರ, ಸಕ್ಕರೆ ಮಾರಾಟ ಹಾಗೂ ಸಂಗ್ರಹ ಸಾಮಗ್ರಿಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಹಣ ದುರ್ಬಳಕೆ ಹಾಗೂ ಭ್ರಷ್ಟಾಚಾರಗಳ ಆಡಳಿತಾತ್ಮಕ ಮತ್ತು ಹಣಕಾಸಿನ ವ್ಯವಹಾರಗಳಲ್ಲಿನ ನಿಯಮಬಾಹಿರ ಚಟುವಟಿಕೆಗಳು ಮತ್ತು ಅವ್ಯವಹಾರಗಳ ಕುರಿತು ಎಲ್ಲಾ ಕಾನೂನಾತ್ಮಕ

ಅಂಶಗಳನ್ನು ಒಳಗೊಂಡಂತೆ ವಿಸ್ತೃತವಾದ ತನಿಖೆ / ವಿಚಾರಣೆ ನಡೆಸುವ ಅವಶ್ಯಕತೆ ಇರುವುದನ್ನು ಸರ್ಕಾರವು ಮನಗಂಡು, ಸದರಿ ಕಾರ್ಖಾನೆಯ ಕುರಿತು ವಿಶೇಷ ವಿಚಾರಣೆಯನ್ನು ನಡೆಸುವುದು ಅಗತ್ಯವಿರುವುದರಿಂದ, ಸರ್ಕಾರದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 18 ಸಿಓಎಫ್ 2022,
ಬೆಂಗಳೂರು , ದಿನಾಂಕ:29ನೇ ಜುಲೈ 2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ.ಹುಬ್ಬಳ್ಳಿ ಕಿತ್ತೂರು ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯಲ್ಲಿ 2018-19 ರಿಂದ 2022-23ನೇ ಸಾಲುಗಳಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರ, ಸಕ್ಕರೆ ಮಾರಾಟ ಹಾಗೂ ಸಂಗ್ರಹ ಸಾಮಗ್ರಿಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಹಣ ದುರ್ಬಳಕೆ ಹಾಗೂ ಭ್ರಷ್ಟಾಚಾರಗಳ ಆಡಳಿತಾತ್ಮಕ ಮತ್ತು ಎಲ್ಲಾ ಕಾನೂನಾತ್ಮಕ ಅಂಶಗಳನ್ನು ಒಳಗೊಂಡಂತೆ, ನಿಯಮಬಾಹಿರ ಚಟುವಟಿಕೆಗಳು ಮತ್ತು ಅವ್ಯವಹಾರದ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ಶ್ರೀ ಎಸ್.ಸಿ. ಇಂಗಳಗಿ, ಮಾನ್ಯ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ನೇತೃತ್ವದಲ್ಲಿ ಶ್ರೀ ಎಸ್.ಎಂ.ಕಲೂತಿ, ನಿವೃತ್ತ ಅಪರ ನಿಬಂಧಕರು, ಸಹಕಾರ ಇಲಾಖೆ ಇವರನ್ನು ಒಳಗೊಂಡ ಜಂಟಿ ತನಿಖೆ ನಡೆಸಲು ನೇಮಿಸಿ ಆದೇಶಿಸಿದೆ.

ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳಿಗೆ ಮೂಲ ಸೌಕರ್ಯವನ್ನು ಹಾಗೂ ಶೀಘ್ರಲಿಪಿಗಾರರ / ಬೆರಳಚ್ಚುಗಾರರ ಸೇವೆಯನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಳಗಾವಿ ಇವರು ಒದಗಿಸತಕ್ಕದ್ದು ಹಾಗೂ ವಿಚಾರಣೆಯನ್ನು ಮುಕ್ತಾಯಗೊಳಿಸಿ, ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿದ ನಂತರ ಅವರಿಗೆ ಸಂಭಾವನೆಯನ್ನು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯಕ್ಕೆ ಒದಗಿಸಿದ ಅನುದಾನದಲ್ಲಿ ಪಾವತಿಸತಕ್ಕದ್ದು.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಮತ್ತು ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ.ಹುಬ್ಬಳ್ಳಿ ಕಿತ್ತೂರು ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಸದರಿ ವಿಚಾರಣೆಗೆ ಅಗತ್ಯ ದಾಖಲೆಗಳೊಂದಿಗೆ ಸಹಕಾರವನ್ನು ನೀಡತಕ್ಕದ್ದು ಹಾಗೂ ಈ ಭಾಗದ ಕಬ್ಬು ಬೆಳೆಗಾರರು, ರೈತ ಮುಖಂಡರು, ರೈತ ಸಂಘಟನೆಗಳು ನೀಡುವ ದೂರುಗಳನ್ನು/ಮನವಿಗಳನ್ನು/ದಾಖಲೆಗಳನ್ನು ವಿಚಾರಣಾಧಿಕಾರಿಗಳಿಗೆ ಸಲ್ಲಿಸಲು ಸೂಕ್ತ ವ್ಯವಸ್ಥೆ ಮಾಡತಕ್ಕದ್ದು.

ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ.ಹುಬ್ಬಳ್ಳಿ ಕಿತ್ತೂರು ತಾಲ್ಲೂಕು, ಬೆಳಗಾವಿ ಜಿಲ್ಲೆ ಈ ಕಾರ್ಖಾನೆಯಲ್ಲಿ ನಡೆದಿವೆ ಎನ್ನಲಾದ ಆಡಳಿತಾತ್ಮಕ ಮತ್ತು ಹಣಕಾಸಿನ ವ್ಯವಹಾರಗಳಲ್ಲಿನ ನಿಯಮಬಾಹಿರ ಚಟುವಟಿಕೆಗಳು ಮತ್ತು ಅವ್ಯವಹಾರದ ಆರೋಪಗಳ ಬಗ್ಗೆ ನಿಯಮಾನುಸಾರ ವಿಚಾರಣೆಯನ್ನು ನಡೆಸಿ, ಸ್ಪಷ್ಟ ಶಿಫಾರಸ್ಸಿನೊಂದಿಗೆ ವಿಚಾರಣಾ ವರದಿಯನ್ನು ಈ ಆದೇಶ ತಲುಪಿದ 90 ದಿನಗಳ ಒಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ನೀಡಿರುವ ಅನುಮೋದನೆ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-169

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ರಾಜ್ಯದ ಉತ್ತರ ಭಾಗದ ಬೆಳಗಾವಿ, ವಿಜಯಪುರ, ಬೀದರ್, ಕಲಬುರಗಿ, ಬಾಗಲಕೋಟೆ, ಗದಗ, ಯಾದಗಿರಿ, ದಾವಣಗೆರೆ, ಉತ್ತರಕನ್ನಡ, ಬಳ್ಳಾರಿ, ವಿಜಯನಗರ ಮತ್ತು ಹಾವೇರಿ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ 2025-26ನೇ ಹಂಗಾಮಿನಲ್ಲಿ ಕಬ್ಬು ಅರೆಯುವ ದಿನಾಂಕವನ್ನು ನಿಗದಿಪಡಿಸುವ ಬಗ್ಗೆ.

ಓದಲಾಗಿದೆ : 1. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ ಎಸ್‌ಕೆ(ಕನಿಮ)/04/2024-25, ದಿನಾಂಕ:17.06.2025.
2. ಕಬ್ಬು ನಿಯಂತ್ರಣ ಮಂಡಳಿ ಸಭೆಯ ನಡವಳಿ, ದಿನಾಂಕ:10.06.2025.

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1), ರ ಪತ್ರದಲ್ಲಿ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ಹಾಗೂ ಅಧ್ಯಕ್ಷರು-ಕಬ್ಬು ನಿಯಂತ್ರಣ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:10.06.2025 ರಂದು ನಡೆದ ಕಬ್ಬು ನಿಯಂತ್ರಣ ಮಂಡಳಿ ಸಭೆಯ ನಡವಳಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

ಮುಂದುವರೆದು ಕ್ರಮ ಸಂಖ್ಯೆ(2) ರ ದಿನಾಂಕ:10.06.2025 ರ ಕಬ್ಬು ನಿಯಂತ್ರಣ ಮಂಡಳಿ ಸಭೆಯ ನಡವಳಿಯಂತೆ, ಉತ್ತರದ ಭಾಗದ ಒಟ್ಟು 12 ಜಿಲ್ಲೆಗಳಾದ ಬೆಳಗಾವಿ, ವಿಜಯಪುರ, ಬೀದರ್, ಕಲಬುರಗಿ, ಬಾಗಲಕೋಟೆ, ಗದಗ, ಯಾದಗಿರಿ, ದಾವಣಗೆರೆ, ಉತ್ತರಕನ್ನಡ, ಬಳ್ಳಾರಿ, ವಿಜಯನಗರ ಮತ್ತು ಹಾವೇರಿ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಹಂಗಾಮು ಪ್ರಾರಂಭಿಸಲು ದಿನಾಂಕ ನಿಗದಿಪಡಿಸುವ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ ನಂತರ ಸದರಿ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳು **ದಿನಾಂಕ:01.11.2025** ರಿಂದ **2025-26 ನೇ** ಸಾಲಿನ ಕಬ್ಬು ಅರೆಯುವ ಹಂಗಾಮು ಪ್ರಾರಂಭಿಸುವ ಬಗ್ಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿರುತ್ತದೆ.

ಆದುದರಿಂದ, ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ಸಲ್ಲಿಸಿದ ಮೇಲ್ಕಂಡ ಪತ್ರ ಹಾಗೂ ದಿನಾಂಕ:10.06.2025 ರ ಕಬ್ಬು ನಿಯಂತ್ರಣ ಮಂಡಳಿ ಸಭೆಯ ನಡವಳಿಯನ್ನು ಕುರಿತು ಕೂಲಂಕಷವಾಗಿ ಪರಿಶೀಲಿಸಲಾಯಿತು. 2024-25ನೇ ಹಂಗಾಮಿನಲ್ಲಿ ಕಬ್ಬು ಕಟಾವು ಮಾಡಿದ ಮತ್ತು ನಾಟಿ ಮಾಡಿದ ದಿನಾಂಕಗಳನ್ನು ಹಾಗೂ 2025-26ನೇ ಹಂಗಾಮಿನಲ್ಲಿ ಕಬ್ಬು ಕಟಾವು ಮಾಡಲು ಅವಶ್ಯಕವಿರುವ ಕಾರ್ಮಿಕರ ಲಭ್ಯತೆಯನ್ನು ಪರಿಗಣಿಸಿ, ಬೆಳಗಾವಿ, ವಿಜಯಪುರ, ಬೀದರ್, ಕಲಬುರಗಿ, ಬಾಗಲಕೋಟೆ, ಗದಗ, ಯಾದಗಿರಿ, ದಾವಣಗೆರೆ, ಉತ್ತರಕನ್ನಡ, ಬಳ್ಳಾರಿ, ವಿಜಯನಗರ ಮತ್ತು ಹಾವೇರಿ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸುವ ದಿನಾಂಕವನ್ನು ನಿಗದಿಪಡಿಸಲು ತೀರ್ಮಾನಿಸಿ, ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 234 ಎಸ್‌ಜಿಎಫ್ 2025
ಬೆಂಗಳೂರು, ದಿನಾಂಕ:06ನೇ ಆಗಸ್ಟ್ 2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಳಗಾವಿ, ವಿಜಯಪುರ, ಬೀದರ್, ಕಲಬುರಗಿ, ಬಾಗಲಕೋಟೆ, ಗದಗ, ಯಾದಗಿರಿ, ದಾವಣಗೆರೆ, ಉತ್ತರಕನ್ನಡ, ಬಳ್ಳಾರಿ, ವಿಜಯನಗರ ಮತ್ತು ಹಾವೇರಿ ಜಿಲ್ಲೆಗಳಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ 2025-26ನೇ ಹಂಗಾಮಿನ ಕಬ್ಬು ನುರಿಸುವ ಕಾರ್ಯವನ್ನು ಕಡ್ಡಾಯವಾಗಿ **ದಿನಾಂಕ:01.11.2025** ರಿಂದ ಪ್ರಾರಂಭಿಸಲು ಅನುಮತಿ

ನೀಡಿ ಆದೇಶಿಸಿದೆ. ಈ ಆದೇಶದ ಅನುಪಾಲನೆಯನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು ಖಾತರಿಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-170

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ, ಉಡುಪಿ ಜಿಲ್ಲೆ –ಈ ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ; ಸಿಐ 313 ಸಿಓಎಫ್ 2023 ದಿನಾಂಕ:20.11.2024
2. ಶ್ರೀ ರಾಧಾಕೃಷ್ಣ ಹೊಳ್ಳ, ಮಾನ್ಯ ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳ ದಿನಾಂಕ:21.12.2024ರ ಪತ್ರ

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ, ಉಡುಪಿ ಜಿಲ್ಲೆ –ಈ ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ಶ್ರೀ ರಾಧಾಕೃಷ್ಣ ಹೊಳ್ಳ, ಮಾನ್ಯ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ, ಉಡುಪಿ ಜಿಲ್ಲೆ–ಈ ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸಲು ಸಮಯಾವಕಾಶದ ಅಗತ್ಯವಿದೆ ಎಂದು ತಿಳಿಸಿರುತ್ತಾರೆ. ಅದರಂತೆ, ವಿಚಾರಣೆಯ ಅವಧಿಯನ್ನು ವಿಸ್ತರಿಸಲು ಕಾಲಾವಕಾಶವನ್ನು ನೀಡಲು ಸರ್ಕಾರವು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 313 ಸಿಓಎಫ್ 2023
ಬೆಂಗಳೂರು , ದಿನಾಂಕ: 15ನೇ ಎಪ್ರೀಲ್ 2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರ, ಉಡುಪಿ ಜಿಲ್ಲೆ –ಈ ಕಾರ್ಖಾನೆಯ ಹಳೆಯ ಯಂತ್ರೋಪಕರಣಗಳ ಟೆಂಡರ್‌ನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಆರೋಪಗಳ ಬಗ್ಗೆ ತನಿಖೆಯನ್ನು ನಡೆಸುವ ಅವಧಿಯನ್ನು ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಒಂದು ತಿಂಗಳು ವಿಸ್ತರಿಸಿ ಆದೇಶಿಸಿದೆ.

ಈ ಆದೇಶವನ್ನು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ನೀಡಿರುವ ಅನುಮೋದನೆ ಮೇರೆಗೆ ಹೊರಡಿಸಿದೆ

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)]
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಕ್ಕರೆ)

PR-171

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2025-26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿಗಾಗಿ ದಿ ಮೈಸೂರು ಷುಗರ್ ಕಂಪನಿಗೆ ದುಡಿಯುವ ಬಂಡವಾಳವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರ ಪತ್ರ ಸಂಖ್ಯೆ:ವ್ಯ.ನಿ/110/2024-25, ದಿನಾಂಕ:28.03.2025, 05.04.2025
2. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಇಎಪಿ/12/2024-25/74, ದಿನಾಂಕ:15.04.2025
3. ಅಧ್ಯಕ್ಷರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರ ಪತ್ರ ಸಂಖ್ಯೆ:MSCO/Chair/63/2025-26 ದಿನಾಂಕ:16.06.2025
4. ಸರ್ಕಾರದ ಆದೇಶ ಸಂಖ್ಯೆ: FD 048 BRS 2025, ದಿನಾಂಕ:15.07.2025

******

ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಪತ್ರದಲ್ಲಿ ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಯು ಆರ್ಥಿಕ ಸಂಕಷ್ಟದಲ್ಲಿರುವುದರಿಂದ, ದಿ ಮೈಸೂರು ಷುಗರ್ ಕಂಪನಿಯ ವ್ಯಾಪ್ತಿಯಲ್ಲಿನ ಕಬ್ಬು ಬೆಳೆಗಾರರ ಹಿತರಕ್ಷಣೆ ದೃಷ್ಟಿಯಿಂದ 2025-26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿಗೆ ರೂ.25.00 ಕೋಟಿಗಳ ದುಡಿಯುವ ಬಂಡವಾಳವನ್ನು ಒದಗಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ ಇವರು *ಸರ್ಕಾರವನ್ನು* ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಪತ್ರದಲ್ಲಿ, ಮೈಸೂರು ಷುಗರ್ ಕಂಪನಿ ಮತ್ತು ರೈತರ ಹಿತದೃಷ್ಟಿಯಿಂದ 2025-26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿಗೆ ರೂ.25.00 ಕೋಟಿಗಳ ದುಡಿಯುವ ಬಂಡವಾಳವನ್ನು ಬಿಡುಗಡೆಗೊಳಿಸುವಂತೆ ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಪತ್ರದಲ್ಲಿ, 2025-26ನೇ ಸಾಲಿನ ಕಬ್ಬು ಅರೆಯುವ ಹಂಗಾಮಿಗೆ ಕಬ್ಬು ಕಟಾವು ಆಳುಗಳಿಗೆ ಮತ್ತು ಸಾರಿಗೆ ವೆಚ್ಚಕ್ಕೆ ರೂ.15.00 ಕೋಟಿಗಳು ಹಾಗೂ ಅಂದಾಜು ರೂ.25.00 ಕೋಟಿಗಳ ದುಡಿಯುವ ಬಂಡವಾಳವು ಅವಶ್ಯಕತೆ ಇರುವುದರಿಂದ ದಿ ಮೈಸೂರು ಷುಗರ್ ಕಂಪನಿಗೆ ರೂ.40.00 ಕೋಟಿಗಳನ್ನು *ದುಡಿಯುವ ಬಂಡವಾಳವಾಗಿ ಬಿಡುಗಡೆಗೊಳಿಸುವಂತೆ* ಕೋರಿರುತ್ತಾರೆ.

ಓದಲಾದ ಕ್ರಮ ಸಂಖ್ಯೆ:(4)ರ ಆದೇಶದಲ್ಲಿ, 2025-26ನೇ ಸಾಲಿನ ಹಂಗಾಮಿಗೆ ಕಬ್ಬು ಅರೆಯಲು ಅಗತ್ಯವಿರುವ ದುಡಿಯುವ ಬಂಡವಾಳದ ಸಲುವಾಗಿ ರೂ.1000.00 ಲಕ್ಷಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಲಾಗಿರುತ್ತದೆ. ಆರ್ಥಿಕ ಇಲಾಖೆಯು ಮಂಜೂರು ಮಾಡಿರುವ ಅನುದಾನವನ್ನು ಬಿಡುಗಡೆಗೊಳಿಸಲು ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 55 ಸಿಓಎಫ್ 2025,

ಬೆಂಗಳೂರು, ದಿನಾಂಕ: 19ನೇ ಜುಲೈ 2025

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಗೆ 2025-26ನೇ ಸಾಲಿನ ಹಂಗಾಮಿಗೆ ಕಬ್ಬು ಅರೆಯಲು ಅಗತ್ಯವಿರುವ ದುಡಿಯುವ ಬಂಡವಾಳದ ಸಲುವಾಗಿ ರೂ.1000.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ:6860-04-190-2-01-394-v-ಸಾಲಗಳು - ಮೈಸೂರು ಸಕ್ಕರೆ ಕಾರ್ಖಾನೆಗೆ ಸಾಲಗಳು- ರಡಿಯಲ್ಲಿ ಬಿಡುಗಡೆಗೊಳಿಸಿ ಖಜಾನೆ-2 ರಿಂದ ಸೆಳೆದು ವೆಚ್ಚ ಮಾಡಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

ಷರತ್ತುಗಳು:-

1. ಸದರಿ ಆದೇಶದಲ್ಲಿ ಬಿಡುಗಡೆಗೊಳಿಸಿದ ರೂ.1000.00 ಲಕ್ಷಗಳ ಮೊತ್ತವನ್ನು ಖಜಾನೆಯಿಂದ ಸೆಳೆಯಲು ಜಂಟಿ ನಿರ್ದೇಶಕರು (ಹೆಚ್.ಆರ್.ಡಿ ಆಡಳಿತ ಮತ್ತು ಇ.ಎಂ), ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಡ್ಯ ಇವರು ಹಣ ಸೆಳೆಯುವ ಅಧಿಕಾರಿಯಾಗಿರುತ್ತಾರೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಸದರಿಯವರು ಹಣ ಸೆಳೆಯುವ ಬಿಲ್‌ನ್ನು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸತಕ್ಕದ್ದು.

2. ಈ ಆದೇಶದಲ್ಲಿ ಬಿಡುಗಡೆಗೊಳಿಸಿದ ಮೊತ್ತವನ್ನು ಯಾವ ಉದ್ದೇಶಕ್ಕೆ ಬಿಡುಗಡೆಗೊಳಿಸಿದೆಯೋ ಆ ಉದ್ದೇಶಕ್ಕೆ ಬಳಸತಕ್ಕದ್ದು ಹಾಗೂ ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
3. ಈ ಆದೇಶದಲ್ಲಿ ಬಿಡುಗಡೆಗೊಳಿಸಿದ ಮೊತ್ತವನ್ನು 2025ರ ಅಂತ್ಯದೊಳಗೆ ಸರ್ಕಾರಕ್ಕೆ ಮರುಪಾವತಿ ಮಾಡತಕ್ಕದ್ದು. ಸದರಿ ಸಾಲದ ಷರತ್ತು ಮತ್ತು ನಿಬಂಧನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.
4. ಮುಂದುವರಿದು, 2026-27ನೇ ಸಾಲಿನ ಕಬ್ಬು ಅರೆಯುವ ಹಂಗಾಮಿನಿಂದ ದಿ ಮೈಸೂರು ಷುಗರ್ ಕಂಪನಿ ಲಿ., ಮಂಡ್ಯ – ಈ ಕಂಪನಿಯ ಕಾರ್ಯಾಚರಣೆಯನ್ನು LROT ಆಧಾರದ ಮೇಲೆ ಕೈಗೊಳ್ಳುವ ಸಂಬಂಧ ನಿಯಮಾನುಸಾರ ಸೂಕ್ತ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:FD 191 ವೆಚ್ಚ-1/2022, Dated: 16.07.2025ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹಾಗೂ ಮಾನ್ಯ ಜವಳಿ ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು ನೀಡಿರುವ ಅನುಮೋದನೆ ಮೇರೆಗೆ ಹೊರಡಿಸಿದೆ..

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಾಂತಾರಾಮ)
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

PR-172

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH